# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007

ಫ್ಯಾಕ್ಸ್: 08192-208008 ದೂರವಾಣಿ ಸಂಖ್ಯೆ: 08192-208029


ಸಂಖ್ಯೆ:ದಾವಿವಿ/ಮಾಸನಿ/741-2/2025-26/2785 ದಿನಾಂಕ: 23.09.2025

## :ಅಧಿಸೂಚನೆ:

**ವಿಷಯ:** ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣ ಹಾಗೂ ಜ್ಞಾನಗಂಗೋತ್ರಿ ಜಿ.ಆರ್ ಹಳ್ಳಿ ಚಿತ್ರದುರ್ಗ ಇಲ್ಲಿನ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಅತಿಥಿ ಉಪನ್ಯಾಸಕರು/ಬೋಧನಾ ಸಹಾಯಕರುಗಳನ್ನು ನೇಮಕ ಮಾಡಲು ಸಂದರ್ಶನವನ್ನು ಏರ್ಪಡಿಸಿರುವ ಕುರಿತು.

**ಉಲ್ಲೇಖ:**
1. ವಿಶ್ವವಿದ್ಯಾನಿಲಯದ ಅಧಿಸೂಚನೆ ಪತ್ರ ಸಂಖ್ಯೆ ದಾವಿವಿ / ಮಾಸನಿ / 741-2 / 2025-26 / 2618 ದಿನಾಂಕ:16.09.2025
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:23.09.2025

******

ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣ ಹಾಗೂ ಜ್ಞಾನಗಂಗೋತ್ರಿ ಜಿ.ಆರ್ ಹಳ್ಳಿ ಚಿತ್ರದುರ್ಗ ಕಾಲೇಜುಗಳಲ್ಲಿನ ಈ ಕೆಳಕಂಡ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ 2025-26ನೇ ಶೈಕ್ಷಣಿಕ ಸಾಲಿನಲ್ಲಿ ಹೆಚ್ಚುವರಿ ಶೈಕ್ಷಣಿಕ ಕಾರ್ಯಭಾರಕ್ಕನುಗುಣವಾಗಿ ಅತಿಥಿ ಉಪನ್ಯಾಸಕರು/ಬೋಧನಾ ಸಹಾಯಕರುಗಳನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳುವ ಬಗ್ಗೆ ಉಲ್ಲೇಖ (1)ರಲ್ಲಿ ಯುಜಿಸಿ ನಿಯಮಗಳನುಸಾರ (**Ph.D., NET/SLET**) ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಮುಂದುವರೆದು, ಅರ್ಹತೆ ಇರುವ ಅಭ್ಯರ್ಥಿಗಳು ದಿನಾಂಕ:25.09.2025 ಹಾಗೂ 26.09.2025 ರಂದು ಪೂರ್ವಾಹ್ನ 11:00ಕ್ಕೆ ವಿಶ್ವವಿದ್ಯಾನಿಲಯದ ಕೇಂದ್ರ ಕಾರ್ಯಾಲಯ, ಶಿವಗಂಗೋತ್ರಿ, (ತೋಳಹುಣಸೆ) ಇಲ್ಲಿ ಏರ್ಪಡಿಸಲಾಗಿರುವ ಸಂದರ್ಶನಗಳಿಗೆ ಹಾಜರಾಗಲು ತಿಳಿಸಲಾಗಿದೆ. ಅಭ್ಯರ್ಥಿಗಳು ಶೈಕ್ಷಣಿಕ ವಿದ್ಯಾರ್ಹತೆ/ಅನುಭವಕ್ಕೆ ಸಂಬಂಧಿಸಿದಂತೆ ಮೂಲ ದಾಖಲಾತಿಗಳು ಹಾಗೂ ಅದರ ಒಂದು ಸೆಟ್ ಜೆರಾಕ್ಸ್ ಪ್ರತಿಯೊಂದಿಗೆ ಸಂದರ್ಶನಕ್ಕೆ ಹಾಜರಾಗಲು ತಿಳಿಸಲಾಗಿದೆ.

### ಸಂದರ್ಶನದ ದಿನಾಂಕ ಮತ್ತು ವೇಳೆ

| ಕ್ರ.ಸಂ. | ಸ್ನಾತಕೋತ್ತರ ವಿಷಯ | ದಿನಾಂಕ ಮತ್ತು ವೇಳೆ |
|---|---|---|
| 1. | ಕಲಾ ನಿಕಾಯ :- ಇಂಗ್ಲೀಷ್, ಅರ್ಥಶಾಸ್ತ್ರ, ಉರ್ದು, ಇತಿಹಾಸ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಹಾಗೂ ಸಮಾಜಶಾಸ್ತ್ರ ವಿಭಾಗ | **25.09.2025** |
| 2. | ನಿರ್ವಾಹಣ ನಿಕಾಯ :- ಎಂ.ಬಿ.ಎ ವಿಭಾಗ | |
| 3. | ವಿಜ್ಞಾನ ನಿಕಾಯ :- ಜೀವರಸಾಯನಶಾಸ್ತ್ರ, ರಸಾಯನಶಾಸ್ತ್ರ, ಅಪರಾಧ ಶಾಸ್ತ್ರ ಮತ್ತು ನ್ಯಾಯ ವಿಜ್ಞಾನ, ಗಣಕ ವಿಜ್ಞಾನ, ಎಂ.ಸಿ.ಎ, ಸೂಕ್ಷ್ಮಜೀವಶಾಸ್ತ್ರ, ಯೋಗ ವಿಜ್ಞಾನ, ಮತ್ತು ಪ್ರಾಣಿಶಾಸ್ತ್ರ ವಿಭಾಗ | **26.09.2025** |
| 4. | ಶಿಕ್ಷಣ ನಿಕಾಯ :- ಶಿಕ್ಷಣ, ದೈಹಿಕ ಶಿಕ್ಷಣ ವಿಭಾಗ | |

ಮೇಲ್ಕಾಣಿಸಿದ **ಸ್ನಾತಕೋತ್ತರ ವಿಷಯಗಳಿಗೆ** ಅತಿಥಿ ಉಪನ್ಯಾಸಕರು/ ಬೋಧನಾ ಸಹಾಯಕರುಗಳನ್ನು ನೇಮಕ ಮಾಡುವ ಅಥವಾ ಮಾಡದಿರುವ ಅಧಿಕಾರವನ್ನು ವಿಶ್ವವಿದ್ಯಾನಿಲಯವು ಹೊಂದಿರುತ್ತದೆಯೆಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ. ತತ್ಸಂಬಂಧ ಆಗಮಿಸುವ ಅಭ್ಯರ್ಥಿಗಳಿಗೆ ವಿಶ್ವವಿದ್ಯಾನಿಲಯದಿಂದ ಯಾವುದೇ ರೀತಿಯ ಪ್ರಯಾಣ/ದಿನ ಭತ್ಯೆಗಳನ್ನು ಪಾವತಿಸಲಾಗುವುದಿಲ್ಲ.

ಆದೇಶಾನುಸಾರ

ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577007

ಸಾರ್ವಜನಿಕ ಮಾಹಿತಿಗಾಗಿ ವಿಶ್ವವಿದ್ಯಾನಿಲಯದ ವೆಬ್ ಸೈಟ್ ಹಾಗೂ ಸೂಚನಾ ಫಲಕಗಳಿಗೆ.

Scanned with CamScanner